# ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿದ್ದಾಪುರ

ಸಿ.ಸಿ **ನಂಃ 138/2024**

**ಸಿ .ಡಬ್ಲೂ 3**

ಹೆಸರುಃ ನಾರಾಯಣ

ಗಂಡನ ಹೆಸರುಃ ಲಕ್ಷ್ಮಣ ನಾಯ್ಕ

ವಯಸ್ಸುಃ 41 ವರ್ಷ

ಉದ್ಯೋಗಃ ಚಾಲಕ

ವಾಸಃ ಹೊಸೂರು , ಸಿದ್ದಾಪುರ .

**ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 03-11-2025 ರಂದು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಪಿರ್ಯಾದಿಯ ಪರ ಃ ಶ್ರೀ ಕೆ ಎಂ .ಎನ್ ನ್ಯಾಯವಾದಿರವರಿಂದಃ**

ನನಗೆ ಫಿರ್ಯಾದುದಾರರು ಹಾಗೂ ಆರೋಪಿತರ ಪರಿಚಯ ಇದೆ . 1 ನೇ ಆರೋಪಿತನು ಫಿರ್ಯಾದುದಾರಳ ಗಂಡನಾಗಬೇಕು . 2 ಮತ್ತು 4 ನೇ ಆರೋಪಿತರು ಫಿರ್ಯಾದುದಾರಳ ಅತ್ತೆ ಮಾವ ಆಗಬೇಕು . 3 ನೇ ಆರೋಪಿತನು ಫಿರ್ಯಾದುದಾರಳ ಮೈದುನ ಆಗಬೇಕು . ಫಿರ್ಯಾದುದಾರಳು ಮದುವೆಯಾದ ನಂತರ ಆರೋಪಿತರೊಂದಿಗೆ ಸೊರಬ ತಾಲ್ಲುಕು ಶಿಂಡ್ಲಿಯಲ್ಲಿ ವಾಸವಾಗಿದ್ದರು . ದಿಃ 01-05-2015 ರಂದು ಫಿರ್ಯಾದುದಾರಳು ಮತ್ತು 1 ನೇ ಆರೋಪಿತನ ನಡುವೆ ಮದುವೆ ಆಗಿರುತ್ತದೆ. ಅವರ ಮದುವೆಯು ಸಿದ್ದಾಪುರದ ಬಂಕೇಶ್ವರ ದೇವಸ್ಥಾನದಲ್ಲಿ ಆಗಿದ್ದು ನಾನು ಕೂಡಾ ಆ ಮದುವೆಗೆ ಹೋಗಿರುತ್ತೇನೆ . ಅರ್ಜಿದಾರಳ ತಂದೆಯವರು 1 ನೇ ಆರೋಪಿಗೆ ಮದುವೆಯ ಸಮಯದಲ್ಲಿ 4,50,00,000/- ಹಣ ಹಾಗೂ ಬಂಗಾರ ಮತ್ತು ಬೆಳ್ಳಿಯನ್ನು ಕೊಟ್ಟಿರುತ್ತಾರೆ. ಫಿರ್ಯಾದುದಾರಳು ಮದುವೆಯಾದ ನಂತರ ಸುಮಾರು 2 ವರ್ಷಗಳ ಕಾಲ ಆರೋಪಿತರೊಂದಿಗೆ ಇದ್ದಳು ನಂತರ ಅವರ ತಂದೆಯ ಮನೆಗೆ ಬಂದಿರುತ್ತಾಳೆ . ಫಿರ್ಯಾದುದಾರಳು ಆರೋಪಿತರು ನೀಡಿದ ವರದಕ್ಷಿಣೆ ಕಿರುಕುಳದಿಂದ ಅವಳ ತಂದೆಯ ಮನೆಗೆ ಬಂದಿರುತ್ತಾರೆ. ಫಿರ್ಯಾದುದಾರಳ ತಂದೆಯವರು 1 ನೇ ಆರೋಪಿತನಿಗೆ ಒಂದು ಕಾರನ್ನು ಕೊಡಿಸಿರುತ್ತಾರೆ .

ದಿಃ 08-11-2020 ರಂದು ಸಂಜೆ 5-30 ಸುಮಾರಿಗೆ ಫಿರ್ಯಾದುದಾರಳ ತವರು ಮನೆಯಾದ ಹೊಸೂರು ಗ್ರಾಮಕ್ಕೆ ಆರೋಪಿತರು ಕಾರಿನಲ್ಲಿ ಬಂದಿದ್ದರು . ನಾನು ಆಗ ಅವರ ಮನೆಗೆ ಬಂದಿದ್ದು ಸಹಿ ಮಾಡು ಎಂದು ಜೋರಾಗಿ ಕೂಗುತ್ತಿದ್ದ ಶಬ್ದ ನನಗೆ ಕೇಳಿಸಿತ್ತು ಹಾಗೂ ಫಿರ್ಯಾದುದಾರಳು ಜೋರಾಗಿ ಕೂಗುತ್ತಿದ್ದಳು . ಆರೋಪಿತರು ಫಿರ್ಯಾದುದಾರಳಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು ನನಗೆ ಕೇಳಿಸಿರುತ್ತದೆ . ಆರೋಪಿತರು ಫಿರ್ಯಾದುದಾರಳಿಗೆ ವಿಚ್ಛೇದನ ಪತ್ರಕ್ಕೆ ಸಹಿ ಮಾಡಲು ಒತ್ತಾಯ

ಮಾಡುತ್ತಿದ್ದರು . ನಾನು ಅಲ್ಲಿಗೆ ಹೋದ ನಂತರ ಚಾಸಾ–2 ರವರು ಅಲ್ಲಿಗೆ ಬಂದಿರುತ್ತಾರೆ . ನಂತರ ಆರೋಪಿತರು ಅವರನ್ನು ಬೈಯ್ಯುತ್ತಾ ಹೊರಟು ಹೋಗಿರುತ್ತಾರೆ .

ಸಾಕ್ಷಿಗೆ ಈ ಹಂತದಲ್ಲಿ ಎರಡು ಪೋಟೋಗಳನ್ನು ತೋರಿಸಿದ್ದು , ಸದ್ರಿ ಪೋಟೋಗಳು ಪಿರ್ಯಾದಿ ಮತ್ತು 1 ನೇ ಆರೋಪಿಯ ಮದುವೆಯ ಪೋಟೊಗಳಾಗಿದ್ದು, ಸದ್ರಿ ಪೋಟೋಗಳನ್ನು ಸಾಕ್ಷಿಯ ನೋಡಿ ಗುರುತಿಸಿದ್ದು , ಅವುಗಳು ಈಗಾಗಲೇ ನಿಪಿ–2 ಮತ್ತು 3 ಎಂದು ಗುರುತಿಸಲಾಗಿದೆ.

ಸಾಕ್ಷಿಗೆ ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು ಸಮಯಾವಕಾಶಿ ನೀಡಿ ಮುಂದೂಡಲಾಯಿತು.

**(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ ಸರಿ ಇದೆ.**

**ಸಹಿ ಇದೆ .**

**ಜೆ.ಎಂ.ಎಫ್.ಸಿ, ಸಿದ್ದಾಪುರ.**

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿದ್ದಾಪುರ

ಸಿ.ಸಿ **ನಂಃ 138/2024**

**ಸಿ .ಡಬ್ಲೂ 2**

| | |
|---|---|
| ಹೆಸರುಃ | ಲಕ್ಷ್ಮಣ್ ಬಂಗಾರಯ್ಯ ನಾಯ್ಕ |
| ತಂದೆಯ ಹೆಸರುಃ | ಬಂಗಾರಯ್ಯ ನಾಯ್ಕ |
| ವಯಸ್ಸುಃ | 80 ವರ್ಷ |
| ಉದ್ಯೋಗಃ | ಮಾಜಿ ಸೈನಿಕ ಮತ್ತು ಕೃಷಿ |

ವಾಸಃ ಹೊಸೂರು ,ಸಿದ್ದಾಪುರ .

**ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 03-11-2025 ರಂದು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಪಿರ್ಯಾಧಿ ಪರ ಶ್ರೀ ಕೆ ಎಂ ಎನ್ ನ್ಯಾಯವಾದಿರವರಿಂದಃ**

ಫಿರ್ಯಾದಿದಾರಳು ನನ್ನ ಮಗಳು1 ನೇ ಆರೋಪಿತನು ನನ್ನ ಅಳಿಯ.2 ಮತ್ತು 4 ನೇ ಆರೋಪಿತರು ನನ್ನ ಬೀಗರು ಹಾಗೂ 3 ನೇ ಆರೋಪಿತನು ನನ್ನ ಅಳಿಯನ ತಮ್ಮ .

ದಿಃ 01-05-2015 ರಂದು ಫಿರ್ಯಾದುದಾರರು ಹಾಗೂ 1 ನೇ ಆರೋಪಿತನ ನಡುವೆ ಹೊಸೂರು ಬಂಕೇಶ್ವರ ದೇವಸ್ಥಾನದಲ್ಲಿ ಮದುವೆ ಮಾಡಿ ಕೊಟ್ಟಿರುತ್ತೇನೆ .ಮದುವೆಯ ಮಾತುಕತೆಯ ಸಮಯದಲ್ಲಿ 1 ರಿಂದ 3 ನೇ ಆರೋಪಿತರು ವರದಕ್ಷಿಣೆಯನ್ನು ಕೇಳಿರುತ್ತಾರೆ. ಅದರಂತೆ ನಾನು ನಾಲ್ಕೂವರೆ ಲಕ್ಷ ರೂ ವರದಕ್ಷಿಣೆ ಹಾಗೂ 11 ತೊಲೆ ಬಂಗಾರವನ್ನು , 1 ಕೆ.ಜಿ ಬೆಳ್ಳಿಯನ್ನು ಆರೋಪಿತರಿಗೆ ಕೊಟ್ಟು ಎಲ್ಲರ ಸಮಕ್ಷಮ ಮದುವೆ ಮಾಡಿ ಕೊಟ್ಟಿರುತ್ತೇನೆ.

ಮದುವೆಯಾದ ನಂತರ ನಾನು 3- 4 ತಿಂಗಳುವರೆಗೆ ಆರೋಪಿತನೊಂದಿಗೆ ನನ್ನ ಮಗಳು ಚೆನ್ನಾಗಿ ಬಾಳ್ವೆ ಮಾಡಿರುತ್ತಾಳೆ . ನಂತರ ಆರೋಪಿತರು ನನ್ನ ಮಗಳಿಗೆ ವರದಕ್ಷಿಣೆಯನ್ನು ತೆಗೆದುಕೊಂಡು ಬಾ ಎಂದು ಚಿತ್ರಹಿಂಸೆ ಕೊಡಲು ಪ್ರಾರಂಬಿಸಿರುತ್ತಾರೆ. ನಂತರ 1 ನೇ ಆರೋಪಿತನು ಒಂದು ಕಾರನ್ನು ಕೊಡಿಸುವ ಬೇಡಿಕೆಯನ್ನು ಇಟ್ಟನು . ಅದರಂತೆ ನಾನು ದಿಃ 16-06-2016 ರಂದು ಮಾರುತಿ ಸುಜುಕಿ ಎ ಸ್ಟಾರ್ ಕಾರ್ ಸಂಖ್ಯೆ KA-04/MH 8303 ಅನ್ನು ಕೊಡಿಸಿರುತ್ತಾರೆ . ಸದ್ರಿ ಕಾರನ್ನು ಖರೀದಿ ಮಾಡುವಾಗ ಆರ್.ಎನ್.ಶೆಟ್ಟಿ ಕಾರ್ ಶೋ ರೂಂ

ನಿಂದ ನನ್ನ SBI ನಲ್ಲಿದ್ದ ಖಾತೆಯಲ್ಲಿನ 2,35,000/- ರೂಗಳನ್ನು ಜಮಾ ಮಾಡಿರುತ್ತೇನೆ .ಕೆಲವು ದಿನಗಳ ನಂತರ 1 ನೇ ಆರೋಪಿತನ ಬೇಡಿಕೆಯಂತೆ ದಿಃ 24-06-2017 ರಂದು



18,500/- ರೂಗಳ ಒಂದು Micromax TV ಯನ್ನು ಆರೋಪಿತರಿಗೆ ನಾನು ರಾಜಶ್ರೀ ಶೋರೂಂ , ಸಾಗರದಿಂದ ಕೊಡಿಸಿರುತ್ತೇನೆ .

ನಂತರ ಆರೋಪಿತರು ಇನ್ನಷ್ಟು ಬೇಡಿಕೆಯನ್ನು ಇಟ್ಟು ನನ್ನ ಮಗಳಿಗೆ ಕಿರುಕುಳ ಕೊಡುತ್ತಿದ್ದರು . ಅದಕ್ಕೆ ನಾನು ನನ್ನ ಬಳಿ ಈಗ ಹಣ ಇಲ್ಲ ಎಂದು ಹೇಳಿರುತ್ತೇನೆ . ನಂತರ ಆರೋಪಿತರು ನನ್ನ SBI ಬ್ಯಾಂಕ್ ಖಾತೆಯ ಡೆಬಿಟ್ ಕಾರ್ಡ್ ಅನ್ನು ಕಿತ್ತುಕೊಂಡಿರುತ್ತಾರೆ . ನಂತರ ನನಗೆ ಕಿರುಕುಳ ಕೊಟ್ಟು ಅದರ ಪಿನ್ ಅನ್ನು ಪಡೆದು ಬಹಳಷ್ಟು ಕಡೆ ಬಳಕೆ ಮಾಡಿ ಸುಮಾರು 80,000/- ಹಣವನ್ನು ಪಡೆದಿರುತ್ತಾರೆ .

ನಂತರ ಆರೋಪಿತರು ಅವರು ಸೊಸೈಟಿ ಮತ್ತು ಬ್ಯಾಂಕ್ ನಿಂದ ಮಾಡಿದ ಮನೆಯ ಸಾಲದ ಕಂತನ್ನು ಕಟ್ಟುವ ಸಲುವಾಗಿ ನನ್ನ ಮಗಳಿಗೆ ಮನೆಯಿಂದ ಹಣ ತೆಗೆದುಕೊಂಡು ಬಾ ಎಂದು ಹೇಳಿದರು . ನನ್ನ ಮಗಳು ಆಗೋಲ್ಲ ಎಂದು ತಿಳಿಸಿರುತ್ತಾಳೆ . ಅದಕ್ಕೆ 2 ರಿಂದ 4 ನೇ ಆರೋಪಿತರು 1 ನೇ ಆರೋಪಿತಗೆ ಪ್ರೇರೇಪಿಸಿ 1 ನೇ ಆರೋಪಿತನು ಅಲ್ಲಿಯೇ ಇದ್ದ ಒಂದು ಬಡಿಗೆಯನ್ನು ತೆಗೆದುಕೊಂಡು ನನ್ನ ಮಗಳ ಎಡ ಕಾಲಿಗೆ ಹೊಡೆದು ಅವಳನ್ನು ಮನೆಯಿಂದ ಆಚೆಗೆ ತಳ್ಳಿ ನೆಲಕ್ಕೆ ಬೀಳಿಸಿರುತ್ತಾರೆ . ಅದರ ಪರಿಣಾಮ ಆಕೆಯ ಸೊಂಟಕ್ಕೆ ಏಟಾಗಿ ಮೂಳೆ ಮುರಿತವಾಗಿರತ್ತದೆ ಹಾಗೂ ಆಕೆಯ ಎಡಗಾಲು ಮೂಳೆ ಮುರಿದಿರುತ್ತದೆ . ನಾನು ನನ್ನ ಮಗಳನ್ನು ಶಿವಮೊಗ್ಗದ ನಂಜಪ್ಪ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಯನ್ನು ಕೊಡಿಸಿ ಆಕೆಗೆ ಆಪರೇಶನ್ ಅನ್ನು ಮಾಡಿಸಿರುತ್ತೇನೆ . ಅಂದಿನಿಂದ ಇಂದಿನನವರೆಗೂ ಅವಳು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದಳು . ಆಕೆಗೆ ಈಗಲೂ ನಡೆಯಲು ಸಾಧ್ಯವಾಗುತ್ತಿಲ್ಲ .

ನನ್ನ ಮಗಳಿಗೆ 2017 ರಂದು ಆಪರೇಶನ್ ಆಗಿರುತ್ತದೆ . ನಂತರ 1 ನೇ ಆರೋಪಿತನು ನನ್ನ ಮಗಳ ಕೈಯಲ್ಲಿ ನಡೆಯಲು ಆಗುವುದಿಲ್ಲ , ಹಾಗೂ ಅವಳನ್ನು ಅವರು ನೋಡಿಕೊಳ್ಳಲು ಆಗವುದಿಲ್ಲ ಎಂದು ಹೇಳಿ , ಜನವರಿ 2020 ರಂದು ಆಕೆಯನ್ನು ನನ್ನ ಮನೆಗೆ ಬಿಟ್ಟು ಹೋಗಿರುತ್ತಾರೆ . ಎಲ್ಲಾ ಚಿಕಿತ್ಸೆಯ ಖರ್ಚುಗಳನ್ನು ನಾನೇ ನೋಡಿಕೊಂಡಿರುತ್ತೇನೆ . ಸದ್ರಿ

ಚಿಕಿತ್ಸೆಗಾಗಿ ನಾನು ಸುಮಾರು 4 ಲಕ್ಷ ರೂ ಗಳನ್ನು ಖರ್ಚು ಮಾಡಿರುತ್ತೇನೆ . ಆಕೆಗೆ ಚಿಕಿತ್ಸೆಯನ್ನು ನೀಡಿದ ನಂತರ ನಾನು ಆರೋಪಿತರಿಗೆ ದೂರವಾಣಿ ಮೂಲಕ ಕರೆ ಮಾಡಿ ಆಕೆಯನ್ನು ವಾಪಾಸು



ಕರೆದುಕೊಂಡು ಹೋಗಲು ಹೇಳಿದಾಗ ಅವರು ಸೂಳೆ , ರಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಹಾಗೂ 1 ನೇ ಆರೋಪಿಗೆ ಬೇರೆ ಮದುವೆಯನ್ನು ಮಾಡುವುದಾಗಿ ಹಾಗೂ ನನ್ನ ಮಗಳಿಗೆ ವಿಚ್ಚೇದನ ಕೊಡುವುದಾಗಿ ಬೆದರಿಸಿರುತ್ತಾರೆ .

3 ನೇ ಆರೋಪಿತನು ನಮಗೆ ದೂರವಾಣಿ ಮೂಲಕ ಕರೆ ಮಾಡಿ ವಿಚ್ಚೇದನ ಪತ್ರಕ್ಕೆ ಸಹಿ ಮಾಡಿ ಎಂದು ಹೇಳಿನನ್ನ ನನಗೆ ಹಾಗೂ ನನ್ನ ಮಗಳಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ . ದಿಃ 08-11-2020 ರ ಸಂಜೆ ಸುಮಾರು 5-6 ಗಂಟೆಗೆ ಆರೋಪಿತರು ಹೊಸೂರು , ಸಿದ್ದಾಪುರ ತಾಲ್ಲೂಕಿನಲ್ಲಿರುವ ನನ್ನ ಮನೆಗೆ ನಾನು ಕೊಡಿಸಿದ ಕಾರಿನ ಮೇಲೆ ಬಂದು 1 ನೇ ಆರೋಪಿಗೆ ಮತ್ತೊಂದು ಮದುವೆ ಮಾಡುವುದಾಗಿ ಹೇಳಿ ನನ್ನ ಮಗಳಿಗೆ ವಿಚ್ಚೇದನ ಪತ್ರಕ್ಕೆ ಸಹಿ ಮಾಡಲು ಒತ್ತಾಯ ಪಡಿಸಿರುತ್ತಾರೆ . ನನ್ನ ಮಗಳು ಸಹಿ ಮಾಡುವುದಿಲ್ಲ ಎಂದು ಹೇಳಿದಾಗ ಆರೋಪಿತರು ಸೂಳೆ , ರಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು ,

ಆಕೆಯನ್ನು ಹೊಡೆಯಲು ಬಂದಾಗ ನನ್ನ ಪಕ್ಕದ ಮನೆಯವರಾದ ನಾರಾಯಣ ಲಕ್ಷ್ಮಣ್ ನಾಯ್ಕ ಅವರು ಜಗಳವನ್ನು ಬಿಡಿಸುತ್ತಿದ್ದಾಗ ನಾನು ತೋಟದಿಂದ ವಾಪಾಸು ಮನೆಗೆ ಬಂದಾಗ ಅವರಎ ನನ್ನನ್ನು ನೋಡಿ ಆರೋಪಿತರು ಎಲ್ಲರೂ ಅಲ್ಲಿಂದ ಹೊರಟು ಹೋಗಿರುತ್ತಾರೆ .

ನಾನು ಈ ಕುರಿತು ಪೋಲಿಸ್ ಠಾಣೆಗೆ ದೂರನ್ನು ನೀಡಲು ನನ್ನ ಮಗಳನ್ನು ಕರೆದುಕೊಂಡು ಹೋದಾಗ ಪೋಲಿಸರು ನನ್ನ ದೂರನ್ನು ಪಡೆದಿರುವುದಿಲ್ಲ . ಈ ನ್ಯಾಯಾಲಯದ ಆದೇಶದ ಪ್ರಕಾರ ಪೋಲಿಸರು ಯಾವುದೇ ತನಿಖೆಯನ್ನು ಮಾಡಿರುವುದಿಲ್ಲ ಹಾಗೂ ನನ್ನ ಹಾಗೂ ಯಾವುದೇ ಸಾಕ್ಷಿಗಳ ಹೇಳಿಕೆಯನ್ನು ಸಹ ಪಡೆದಿರುವುದಿಲ್ಲ .

ಆದ್ದರಿಂದ ಆರೋಪಿತರಿಗೆ ಕಾನೂನು ರೀತ್ಯಾ ಶಿಕ್ಷೆ ಕೊಡಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ .

ಸಾಕ್ಷಿಗ ಿ ತನ್ನ ಮಗಳಾದ ಪಿರ್ಯಾದಿ ಹಾಗೂ 1 ನೇ ಆರೋಪಿತನ ಮದುವೆಯ ಆಮಂತ್ರಣ ಪತ್ರವನ್ನು ಹಾಜರುಪಡಿಸುತ್ತಿದ್ದು ಅದು ಈಗಾಗಲೇ ನಿಸಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯು ತನ್ನ ಮದುವೆಯ 5 ಭಾವ ಚಿತ್ರಗಳನ್ನು ಹಾಜುರಪಡಿಸುತ್ತಿದ್ದು ,ಅವುಗಳು ಈಗಾಗಲೇ ನಿಸಿ-2 ರಿಂದ 6 ಎಂದು ಗುರುತಿಸಲಾಗಿದ್ದು. ಸಾಕ್ಷಿಯು ದಿಃ 01-06-2016 ರಂದ 31-07-2019 ವರೆಗೆ ನನ್ನ SBI ಬ್ಯಾಂಕ್ ನ Account statement ಅನ್ನು ಹಾಜರುಪಡಿಸುತ್ತಿದ್ದು ಅದು ಈಗಾಗಲೇ ನು ನಿಸಿ-7 ಎಂದು ಗುರುತಿಸಲಾಗಿದ್ದು, ಸಾಕ್ಷಿಯು ದಿಃ 01-08-2019



ರಂದ 31-01-2020 ವರೆಗೆ ನನ್ನ SBI ಬ್ಯಾಂಕ್ ನ Account statement ಅನ್ನು ಹಾಜರುಪಡಿಸುತ್ತಿದ್ದು ಅದು ಈಗಾಗಲೇ ನಿಸಿ-8 ಎಂದು ಗುರುತಿಸಲಾಗಿರುತ್ತದೆ . ನಿಶಾನೆ ಸಿ-5 ರ ಪ್ರಕಾರ ನಾನು 1 ನೇ ಆರೋಪಿಗೆ ನನ್ನ ಮಗಳ ಮದುವೆ ಕಾಲಕ್ಕೆ 11 ತೋಲೆ ಬಂಗಾರ , ಕೊರಳ ಚೈನು, ಕೈ ಕಡಗ, ಉಂಗುರವನ್ನು ವರದಕ್ಷಿಣೆಯಾಗಿ ನೀಡಿರುತ್ತೇನೆ. ನಿಸಿ-5 ರ ಪ್ರಕಾರ 1 ಕೆ ಜಿ ಬೆಳ್ಳಿ ವಸ್ತುಗಳನ್ನು ವರದಕ್ಷಿಣೆಯಾಗಿ 1 ನೇ ಆರೋಪಿಗೆ ನೀಡಿರುತ್ತೇನೆ. ನಿಸಿ-12 ರ ಪೋಟೋದ ಪ್ರಕಾರ ಬೆಳ್ಳಿಯ ಸಾಮಾಗ್ರಿಗಳು, ಬಂಗಾರದ ವಸ್ತುಗಳು, ಮದುವೆ ಪತ್ರ ಗಳನ್ನು ಇಟ್ಟಿರುವ ಪೋಟೋವಾಗಿರುತ್ತದೆ. ನಿಸಿ-13 ರ ಪೋಟೋದ ಪ್ರಕಾರ ಬೆಳ್ಳಿಯ ಸಾಮಾಗ್ರಿಗಳು, ಬಂಗಾರದ ವಸ್ತುಗಳು, ಮದುವೆ ಪತ್ರ ಗಳನ್ನು ವರದಕ್ಷಿಣೆಯಾಗಿ 1 ನೇ ಆರೋಪಿಗೆ ನೀಡುವ ಪೋಟೋವಾಗಿರುತ್ತದೆ. ನಿಸಿ- 14 ರ ಪೋಟೋದಲ್ಲಿರುವ ಕಾರನ್ನು ನಾನು ವರದಕ್ಷಿಣೆಯಾಗಿ 1 ನೇ ಆರೋಪಿಗೆ ನೀಡಿದ್ದು, ಸದ್ರಿ ಕಾರನ ಮುಂದೆ ನಿಂತಿರುತ್ತಾರೆ. ನಿಸಿ- 7 ರ ಪ್ರಕಾರ ನನ್ನ ಖಾತೆಯಿಂದ 1 ನೇ ಆರೋಪಿಯ ಖಾತೆಗೆ ರೂ. 80,000/- ಹಣವನ್ನು ಜಮಾ ಮಾಡಿರುತ್ತೇನೆ. ನಿಸಿ- 7 ರ ಪ್ರಕಾರ ನನ್ನ ಖಾತೆಯಿಂದ 1 ನೇ ಆರೋಪಿಗೆ ಟಿ ವಿ ಕೊಡಿಸಲು ಟಿ ವಿ ಶೋ

ರೋಮ್ ರವರ ಖಾತೆಗೆ ರೂ. 18,500/- ಹಣವನ್ನು ಜಮಾ ಮಾಡಿರುತ್ತೇನೆ. ನಿಸಿ- 7 ರ ಪ್ರಕಾರ ನನ್ನ ಖಾತೆಯಿಂದ 1 ನೇ ಆರೋಪಿಯ ಖಾತೆಗೆ ರೂ. 4,00,000/- ಹಣವನ್ನು ಜಮಾ ಮಾಡಿರುತ್ತೇನೆ.

ಸಾಕ್ಷಿ ಈ ಹಂತದಲ್ಲಿ 8 ಭಾವಚಿತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಸಿ-9 ರಿಂದ 16 ಎಂದು ಗುರುತಿಸಲಾಯಿತು. ಸದರಿ ನಿ.ಸಿ-9 ರಿಂದ 16 ಪೋಟೊಗಳಿಗೆ ಸಂಬಂದಿಸಿದಂತೆ ಎರಡು ಸಿಡಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಸಿ-17 ಮತ್ತು ನಿಸಿ-18 ಎಂದು ಗುರುತಿಸಲಾಯಿತು. ದಿಃ 30-04-2015 ರಂದು ಮಹಾಗಣಪತಿ ಜ್ಯೂವೆಲರ್ಸ ವರ್ಕ್ಸ ಸಿದ್ದಾಪುರ ರವರು ನೀಡಿರುವ ರಶೀಧಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ-19 ಎಂದು ಗುರುತಿಸಲಾಯಿತು. ದಿಃ 14-02-2015 ರಂದು ಮಹಾಗಣಪತಿ ಜ್ಯೂವೆಲರ್ಸ ವರ್ಕ್ಸ ಸಿದ್ದಾಪುರ ರವರು ನೀಡಿರುವ ರಶೀಧಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ-20 ಎಂದು ಗುರುತಿಸಲಾಯಿತು. ದಿಃ 15-06-2018 ರಂದು ಮಹಾಗಣಪತಿ ಜ್ಯೂವೆಲರ್ಸ ವರ್ಕ್ಸ ಸಿದ್ದಾಪುರ ರವರು ನೀಡಿರುವ ರಶೀಧಿಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ-21 ಎಂದು ಗುರುತಿಸಲಾಯಿತು.



ನಿ.ಸಿ-9 ಭಾವಚಿತ್ರದಲ್ಲಿ ನಾನು 1 ನೇ ಆರೋಪಿಗೆ ಒಂದು ಬಂಗಾರದ ಸರವನ್ನು ಹಾಕುತ್ತಿರುವ ಪೋಟೋವಾಗಿದ್ದು ನಿಸಿ-12 ಭಾವಚಿತ್ರದಲ್ಲಿ ನಾನು 1 ನೇ ಆರೋಪಿಗೆ ವರದಕ್ಷಿಣೆಯಾಗಿ 11 ತೊಲೆ ಬಂಗಾರ ಅವುಗಳು 6 ತೊಲೆ ಬಂಗಾರದ ನೆಕ್ಲೆಸ್ , 2 ತೊಲೆ ಕಿವಿ ಓಲೆ, 1 ತೊಲೆ ಇನ್ನೊಂದು ಜೊತೆ ಕಿವಿ ಓಲೆ, 3 ತೊಲೆ ತಾಳಿ ಚೈನ್, 1 ತೊಲೆ ಮತ್ತೊಂದು ಜೊತೆ ಕಿವಿ ಓಲೆ, ಬೆಳ್ಳಿ ಸೊಂಟದ ಪಟ್ಟಿ, ಬೆಳ್ಳಿ ಕಳಸ, ಬೆಳ್ಳಿ ಪ್ಲೇಟ್, ಬೆಳ್ಳಿಯ ತಂಬಿಗೆ, ಕೊಟ್ಟಿರುವ ಬಗ್ಗೆ ತೆಗೆಸಿದ ಭಾವಚಿತ್ರ ಆಗಿರುತ್ತದೆ.

ನಿಸಿ -13 ರ ಭಾವಚಿತ್ರದಲ್ಲಿ ನಾನು 1 ನೇ ಆರೋಪಿಗೆ ಬೆಳ್ಳಿ ಕಳಸವನ್ನು ಕೊಟ್ಟ ಬಗ್ಗೆ ತೆಗೆಸಿದ ಪೊಟೊ ಆಗಿರುತ್ತದೆ.

ನಿಸಿ-14 ಮತ್ತು 15 ಭಾವಚಿತ್ರದಲ್ಲಿ ಕಾಣುವ ಕಾರನ್ನು ನಾನು 1 ನೇ ಆರೋಪಿಗೆ ನನ್ನ ಮಗಳಾದ ಪಿರ್ಯಾಧಿಯ ಮದುವೆ ಕಾಲಕ್ಕೆ ಕೊಡಿಸಿದ ಕಾರು ಆಗಿದ್ದು ಆ ಬಗ್ಗೆ ತೆಗೆದಿರುವ ಭಾವಚಿತ್ರ ಆಗಿರುತ್ತದೆ.

ಆದ್ದರಿಂದ ಆರೋಪಿತರಿಗೆ ಕಾನೂನು ರೀತ್ಯಾ ಶಿಕ್ಷೆ ಕೊಡಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ .

ಈ ಹಂತದಲ್ಲಿ ಪಾಟೀಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮೂಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ ಸರಿ ಇದೆ.

ಸಹಿ ಇದೆ.

ಜೆ.ಎಂ.ಎಫ್.ಸಿ, ಸಿದ್ದಾಪುರ.